ಶಾಲೆಗಳಲ್ಲಿ ನಿಗದಿಪಡಿಸಿದ ಸಂಖ್ಯೆಗಿಂತ ಅಧಿಕ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುತ್ತಿರುವುದು

1011 (1183)

ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸರ್ಕಾರದಿಂದ ಮಾನ್ಯತೆ ಪಡೆದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ನಡೆಸುತ್ತಿರುವ ಅನುದಾನ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ಸರ್ಕಾರ ನಿಗದಿಪಡಿಸಿದ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿ ಶಿಕ್ಷಣ ಕ್ಷೇತ್ರವನ್ನು ಹಣ ಮಾಡಿಕೊಳ್ಳುವ ಉದ್ಯೋಗವನ್ನಾಗಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದು ಕೊಂಡ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಪೋಷಕರಿಂದ ಯಾವುದೇ ಲಿಖಿತ ದೂರು ಬಂದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ವಿಶ್ವ ಆರೋಗ್ಯ ಸಂಸ್ಥೆಯಿಂದ ಬಿಡುಗಡೆಯಾದ ಹಣ

1012 (1185)

ಶ್ರೀ ಹೆಚ್. ಡಿ. ಬಸವರಾಜ್ (ವಿರಾಜ ಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ 1996-97 ರಿಂದ ಈವರೆಗೆ ವಿಶ್ವ ಆರೋಗ್ಯ ಸಂಸ್ಥೆ ಅಥವಾ ಇನ್ನಿತರ ಮೂಲಗಳ ಮುಖಾಂತರ ಆಸ್ಪತ್ರೆ ನವೀಕರಣ ಮತ್ತು ಹೊಸ ಆಸ್ಪತ್ರೆಗಳ ನಿರ್ಮಾಣಕ್ಕೆ ಬಿಡುಗಡೆ ಮಾಡಲಾದ ಹಣವೆಷ್ಟು ?

ಆ) ಬಿಡುಗಡೆ ಮಾಡಲಾದ ಹಣವನ್ನು ರಾಜ್ಯದ ಯಾವ ಯಾವ ಸ್ಥಳಗಳಲ್ಲಿನ ಯಾವ ಯಾವ ಕಾಮಗಾರಿಗಳಿಗೆ ವಿನಿಯೋಗಿಸಿಕೊಳ್ಳಲಾಗಿದೆ ?

ಡಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ ಆಸ್ಪತ್ರೆಗಳ ನವೀಕರಣ ಮತ್ತು ನಿರ್ಮಾಣಕ್ಕಾಗಿ ಕೆಳಗಿನ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

i) **ವಿಶ್ವಬ್ಯಾಂಕ್ ನೆರವಿನ ರೂ. 546 ಕೋಟಿ ಅಂದಾಜಿನ ಕರ್ನಾಟಕ ಆರೋಗ್ಯ ಪದ್ಧತಿಗಳ ಅಭಿವೃದ್ಧಿ ಯೋಜನೆ**

ವಿಶ್ವಬ್ಯಾಂಕ್ ಪೂರ್ಣ ವೊತ್ತವನ್ನು ಸಾಲದ ರೂಪದಲ್ಲಿ ಒದಗಿಸುವುದು. ಅನುಮೋದನೆಯಾಗಿರುವ ಯೋಜನಾ ವರದಿಯಂತೆ ರಾಜ್ಯ ಸರ್ಕಾರವು ಹಣವನ್ನು ಖರ್ಚುಮಾಡಿ ಖರ್ಚುಮಾಡಿದ ಹಣವನ್ನು ವಿಶ್ವಬ್ಯಾಂಕಿನಿಂದ ಕೇಂದ್ರ ಸರ್ಕಾರದ ಮುಖಾಂತರ ಪುನರ್ ವಿತರಣೆ ಮೂಲಕ ಪಡೆಯಲಾಗುವುದು. ಇಲ್ಲಿಯವರೆಗೆ ರೂ. 142.18 ಕೋಟಿ ಕರ್ನಾಟಕ ಸರ್ಕಾರವು ಬಿಡುಗಡೆ ಮಾಡಿದೆ.

ii) **ಜರ್ಮನ್ ನೆರವಿನ ರೂ. 80 ಕೋಟಿ ಅಂದಾಜಿನ ಕೆಎಫ್‌ಡಬ್ಲ್ಯೂ ಯೋಜನೆ.**
ಈ ಯೋಜನೆಯಡಿ ಆಸ್ಪತ್ರೆ ನವೀಕರಣಕ್ಕಾಗಿ ಹಣವನ್ನು ಜರ್ಮನಿಯ ಕೆಎಫ್‌ಡಬ್ಲ್ಯೂ ಬ್ಯಾಂಕ್ ಯೋಜನಾ ಅಧಿಕಾರಿಗಳಿಗೆ ಬಿಡುಗಡೆಮಾಡಿರುತ್ತದೆ.

ರಾಜ್ಯದ ಬೆಂಗಳೂರು, ಮೈಸೂರು ಮತ್ತು ಬೆಳಗಾಂ ಕಂದಾಯ ವಿಭಾಗಗಳಲ್ಲಿಯ ಒಟ್ಟು 201 ಆಸ್ಪತ್ರೆಗಳ ಅಭಿವೃದ್ಧಿಯನ್ನೊಳಗೊಂಡ ರೂ. 546 ಕೋಟಿ ವೆಚ್ಚದ ಈ ಯೋಜನೆಯು ವಿಶ್ವಬ್ಯಾಂಕಿನಿಂದ ಅನುಮೋದಿತವಾಗಿದೆ.

ಯೋಜನೆಯ ಪ್ರಗತಿಯು ಕೆಳಕಂಡಂತಿದೆ.

i) **ಕಟ್ಟಡ ಕಾಮಗಾರಿಗಳು :** 201 ಆಸ್ಪತ್ರೆಗಳಲ್ಲಿ 183 ಆಸ್ಪತ್ರೆಗಳ ಅಂದಾಜುಗಳಿಗೆ ವಿಶ್ವಬ್ಯಾಂಕ್ ವಾಸ್ತುಶಿಲ್ಪ ತಜ್ಞರಿಂದ ಅನುಮೋದನೆ ದೊರೆತಿದೆ. ಇವುಗಳಲ್ಲಿ 119 ಕಾಮಗಾರಿಗಳನ್ನು ಟೆಂಡರ್ ಮೂಲಕ ಮತ್ತು 6 ಕಾಮಗಾರಿಗಳನ್ನು "ಸ್ಥಳೀಯ ಖರೀದಿ" ಆಧಾರದ ಮೇಲೆ ತೆಗೆದು ಕೊಳ್ಳಲಾಗಿದ್ದು ಪ್ರಗತಿಯಲ್ಲಿವೆ.

ii) **ಸಲಕರಣೆಗಳು :** ಸರಬರಾಜು ಯೋಜನೆಯನ್ವಯ ವಿವಿಧ ಆಸ್ಪತ್ರೆಗಳಿಗೆ ಅಗತ್ಯವಾದ ವೈದ್ಯಕೀಯ ಹಾಗೂ ವೈದ್ಯಕೀಯೇತರ ಸಲಕರಣೆಗಳನ್ನು ಒದಗಿಸಲು ಕ್ರಮ ತೆಗೆದು ಕೊಳ್ಳಲಾಗಿದ್ದು ಸಲಕರಣೆಗಳು ಸರಬರಾಜು ಹಂತದಲ್ಲಿದೆ.

iii) **ವಾಹನಗಳು :** ಈಗಾಗಲೇ 180 ಟಾಟಾ ಸುಮೋ ವಾಹನಗಳು ಹಾಗೂ 21 ಸಲಕರಣಾ ನಿರ್ವಹಣಾ ವಾಹನಗಳನ್ನು ಖರೀದಿಸಲಾಗಿದ್ದು ವಿವಿಧ ಆಸ್ಪತ್ರೆಗಳಿಗೆ ಹಂಚಲಾಗಿದೆ. 166 ಆಂಬುಲೆನ್ಸ್ ವಾಹನಗಳನ್ನು ಖರೀದಿಸಲು ಕ್ರಮ ತೆಗೆದು ಕೊಳ್ಳಲಾಗಿದೆ.

iv) **ಔಷಧಗಳು :** 42 ವಿವಿಧ ಔಷಧಗಳನ್ನು ಖರೀದಿಸಿ ವಿತರಿಸಲಾಗಿದೆ.

v) **ತರಬೇತಿ :** ವೈದ್ಯರಿಗೆ ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗೆ ತಮ್ಮ ಕೌಶಲ್ಯವನ್ನು ಉತ್ತಮ ಪಡಿಸಿಕೊಳ್ಳಲು ಅಗತ್ಯ ತರಬೇತಿಯನ್ನು ಕೊಡಲಾಗುತ್ತಿದೆ.

vi) **ಸಿಬ್ಬಂದಿ :** ವಿಶ್ವಬ್ಯಾಂಕ್ ನಿಯಮಾವಳಿಯಂತೆ ಅಗತ್ಯ ವೈದ್ಯರು, ಅರೆವೈದ್ಯಕೀಯ ಹಾಗೂ ಇತರೆ ಸಿಬ್ಬಂದಿಯನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಫೆಬ್ರವರಿ 1999 ರ ಅಂತ್ಯದವರೆಗೆ ಪುನರ್ ವಿತರಣೆ ಆಧಾರದಲ್ಲಿ ವಿಶ್ವಬ್ಯಾಂಕಿನಿಂದ ಕೇಂದ್ರ ಸರ್ಕಾರದ ಮೂಲಕ ರಾಜ್ಯ ಸರ್ಕಾರಕ್ಕೆ ರೂ. 91.04 ಕೋಟಿ ಬಂದಿರುತ್ತದೆ.

ಜರ್ಮನ್ ನೆರವಿನ ಕೆಎಫ್‌ಡಬ್ಲ್ಯೂ ಯೋಜನೆಯಡಿ ಗುಲ್ಬರ್ಗದ ಕಂದಾಯ ವಿಭಾಗದ 51 ಆಸ್ಪತ್ರೆಗಳ ನವೀಕರಣ ಹಾಗೂ ವಿಸ್ತರಣಾ ಕಾರ್ಯಗಳನ್ನು ಕೈಗೊಳ್ಳಲಾಗುವುದು. ಈ ಯೋಜನೆಯಡಿ ಬರುವ ನೆರವು ಅನುದಾನದ ರೂಪದಲ್ಲಿರುವುದು.

ಯೋಜನೆಯ ವ್ಯಾಪ್ತಿಯಲ್ಲಿ ಬರುವ 51 ಆಸ್ಪತ್ರೆಗಳಲ್ಲಿ 26 ಆಸ್ಪತ್ರೆಗಳ ಕಾಮಗಾರಿಗಳನ್ನು ಮೊದಲ ಹಂತದಲ್ಲಿ ಸೇರಿಸಲಾಗಿದೆ. ಈ ಕಾಮಗಾರಿಗಳಿಗೆ ಪ್ರಾರಂಭಿಕ ನಕ್ಷೆಗಳು ಜರ್ಮನ್ ಸಲಹೆಗಾರ ವಾಸ್ತುಶಿಲ್ಪ ತಜ್ಞರಿಂದ ಅನುಮೋದಿತವಾಗಿದ್ದು ಅವುಗಳನ್ನು ಅನುಮೋದನೆಗಾಗಿ ಕೆಎಫ್‌ಡಬ್ಲ್ಯೂಗೆ ಕಳುಹಿಸಲು ಕ್ರಮ ಕೈಗೊಳ್ಳಲಾಗಿದೆ. ಅನುಮೋದನೆ ದೊರೆತ ನಂತರ ಅಂತಿಮ ನಕ್ಷೆ ಮತ್ತು ಅಂದಾಜುಗಳನ್ನು ತಯಾರಿಸಿ ಟೆಂಡರುಗಳನ್ನು ಕರೆಯಲು ಕ್ರಮ ತೆಗೆದುಕೊಳ್ಳಲಾಗುವುದು.

ಜಿಲ್ಲಾ ಆಸ್ಪತ್ರೆ ಗುಲ್ಬರ್ಗಾದಲ್ಲಿ ವೈದ್ಯಕೀಯ ಸಲಹಾ ಮಂಡಳಿ ಕಾರ್ಯನಿರ್ವಹಿಸದೇ ಇರುವುದು

1013 (1427)

ಶ್ರೀ. ಸಿ. ಗುರುನಾಥ್ (ಶಹಾಬಾದ್) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕಳೆದ ಕೆಲವು ವರ್ಷಗಳಿಂದ ಜಿಲ್ಲಾ ಆಸ್ಪತ್ರೆ ಗುಲ್ಬರ್ಗಾದಲ್ಲಿ ವೈದ್ಯಕೀಯ ಸಲಹಾ ಮಂಡಳಿ ಕಾರ್ಯನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಮಂಡಳಿಯನ್ನು ಪುನರ್‌ರಚಿಸಲು ಸರ್ಕಾರದಿಂದ ಯಾವ ಹಂತದ ಕ್ರಮ ಜರುಗಿಸಲಾಗಿದೆ.

ಡಾ. ಎಂ. ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಇಲ್ಲಾ

ಆ) ಜಿಲ್ಲಾ ಆಸ್ಪತ್ರೆ ಗುಲ್ಬರ್ಗಾದಲ್ಲಿ ಯಾವುದೇ ವೈದ್ಯಕೀಯ ಸಲಹಾ ಮಂಡಳಿ ಇರುವುದಿಲ್ಲ. ಆದರೆ ಸದರಿ ಜಿಲ್ಲಾ ಆಸ್ಪತ್ರೆಯಲ್ಲಿ ಸಂದರ್ಶಕ ಮಂಡಳಿ ಇದ್ದು, ಅದನ್ನು ಈಗ ಪುನರ್ ರಚಿಸುವ ಬಗ್ಗೆ ಪರಿಶೀಲನೆಯಲ್ಲಿದೆ.

ಎನ್. ಟಿ. ಪಿ. ಸಿ. ತರಬೇತಿ ಪಡೆದ ಅಭ್ಯರ್ಥಿಗಳು

1014 (1385)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ (ಎನ್.ಟಿ.ಟಿ.ಸಿ.) ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ ಎಷ್ಟು ?

ಆ) ಈ ತರಬೇತಿ ಪಡೆದ ಅಭ್ಯರ್ಥಿಗಳನ್ನು ಶಿಕ್ಷಕರ ಹುದ್ದೆಗಳಲ್ಲಿ ನೇಮಕ ಮಾಡಲು ಸರ್ಕಾರ ಪರಿಗಣನೆಗೆ ತೆಗೆದುಕೊಳ್ಳುವುದೇ ; ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?